

# ಇರುವುದೊಂದೇ ಪರಿಸರ

**ಮತ್ತೆ 'ವಿಶ್ವ ಪರಿಸರ ದಿನ' ಬಂದಿದೆ. ಈ ಬಾರಿ 'ಜಗವೊಂದೇ, ಪರಿಸರವೊಂದೇ' ಎಂಬ ಧ್ಯೇಯವಾಕ್ಯದೊಂದಿಗೆ ಪರಿಸರ ದಿನವನ್ನು ಆಚರಿಸಲು ಇಡೀ ವಿಶ್ವವೇ ಸಜ್ಜಾಗಿದೆ. ಒಂದಿಷ್ಟು ಸಸಿಗಳನ್ನು ನೆಡುವುದು, ಪರಿಸರ ಮಾಲಿನ್ಯದ ವಿರುದ್ಧ ಘೋಷಣೆ ಕೂಗುವುದು, ಭೂಮಿಯನ್ನು ಉಳಿಸಿಕೊಳ್ಳಲು ಪಣ ತೊಡುವುದು.. ಇವಿಷ್ಟನ್ನೇ ಮಾಡಿಬಿಟ್ಟರೆ ಸಾಕೇ ಅಥವಾ ಇರುವುದೊಂದೇ ಭೂಮಿಯನ್ನು ಮುಂದಿನ ಪೀಳಿಗೆಗೆ ಉಳಿಸಲು ದೀರ್ಘಕಾಲೀನ ಯೋಜನೆಗಳ ಅವಶ್ಯಕತೆ ಇದೆಯೇ?**

■ ಸುಮಂಗಲಾ ಎಸ್. ಮುಮ್ಮಿಗಟ್ಟಿ

ಅದು ಕೊಡಗಿನ ಮಾಕುಟ್ಟದ ನಿತ್ಯ ಹರಿದ್ವರ್ಣದ ದಟ್ಟ ಕಾಡು. ಪಶ್ಚಿಮ ಘಟ್ಟದ ಈ ಮಲೆಗಳಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಹುಡುಕಾಟ ನಡೆಸಿದಾಗ ಸೀತಾಫಲ ಕುಟುಂಬಕ್ಕೆ ಸೇರಿದ ಎರಡು ಹೊಸ ಸಸ್ಯ ಪ್ರಭೇದಗಳು ಕಂಡುಬಂದವು. 'ಒರಿಫಿಯಾ ಮಂಬಾರಿಕಾ' ಮತ್ತು 'ಒರಿಫಿಯಾ ಶಿವರಂಜನಿ' ಎಂಬ ಎರಡು ಹೊಸ ಸಸ್ಯ ಪ್ರಭೇದಗಳು ಭೂಮಿಯ ಇನ್ನಾವುದೇ ಭಾಗದಲ್ಲೂ ದೊರೆಯದ ಅಪರೂಪದ ಗಿಡಗಳು.

ಈ ಸುದ್ದಿ ವಿಜ್ಞಾನಿಗಳಲ್ಲಿ ಮಾತ್ರವಲ್ಲ, ಪರಿಸರ ಪ್ರೇಮಿಗಳಲ್ಲಿ, ಸಸ್ಯಶಾಸ್ತ್ರ ವಿದ್ಯಾರ್ಥಿಗಳಲ್ಲಿ, ಅಧ್ಯಯನಶೀಲರಲ್ಲಿ ಹೊಸ ಸಂಚಲನ ಸೃಷ್ಟಿಸಿತು. ಸೌರವ್ಯೂಹದ ಗ್ರಹಗಳಲ್ಲಿ ಇದುವರೆಗೆ ಜೀವ ಸಂಚಲನವಿರುವ ಏಕೈಕ ಗ್ರಹ ಎಂಬ ಹೆಗ್ಗಳಿಕೆಗೆ ಪಾತ್ರವಾದ ನಮ್ಮ ಭೂಮಿ ಮಾನವ ಸೃಷ್ಟಿ ಅವಾಂತರಗಳಿಂದ ಗಂಡಾಂತರದೆಡೆಗೆ ಸಾಗುತ್ತಿದೆ ಎಂದು ಆತಂಕಗೊಂಡವರಲ್ಲಿ ಈ ಸಂಶೋಧನೆ ಒಂದಿಷ್ಟು ಆಶಾಭಾವದ ಸಂಚಲನ ಮೂಡಿಸಿದ್ದಂತೂ ನಿಜ. ಈ ಗುಂಡನೆ ಪೃಥ್ವಿಯ ನಿರಂತರ ಚಲನೆಗೆ ಸದ್ಯಕ್ಕಂತೂ ಪೂರ್ಣ ವಿರಾಮವಿಲ್ಲ, ಭವಿಷ್ಯವಿದೆ, ಮುಂದಿನ ಪೀಳಿಗೆಗಳಿಗೆ ರಾತ್ರಿ ಚಂದಿರ, ಹಗಲು ಸೂರ್ಯನನ್ನು ಕಾಣುವ ಅವಕಾಶವಿದೆ, ಹಸಿರು ಸಸ್ಯರಾಶಿಯನ್ನು ಕಣ್ತುಂಬಿಕೊಳ್ಳುವ ಅದೃಷ್ಟವಿದೆ, ಸಮುದ್ರದ ಅಪ್ಪಳಿಸುವ ಅಲೆಗಳಲ್ಲಿ ತೊಯ್ದೇಳುವ ಹುಮ್ಮಸಿದೆ ಎಂದು ಮತ್ತೊಮ್ಮೆ, ಮಗದೊಮ್ಮೆ ಕನಸುಗಳ ಬೀಜ ಬಿತ್ತುವುದು ಇಂತಹ ಸಂಶೋಧನೆಗಳೇ.

ಹಾಗೆಯೇ ಅಪರೂಪದ ಹಂಪ್ ಬ್ಯಾಕ್ ಡಾಲ್ಫಿನ್‌ಗಳು, ಫಿನ್‌ರಹಿತ ಪಾರಪೈಸ್‌ಗಳು ಸತ್ತಾಗಲೂ ಸುದ್ದಿಯಾಯಿತು. ಅಪಾಯದಂಚಿನಲ್ಲಿರುವ ಈ ಜೀವಿ ಪ್ರಭೇದಗಳ ಸತ್ತ ದೇಹಗಳು ಮುಂಬಯಿಯ ಮರೈನ್ ಡ್ರೈವ್, ನಾರಿಮನ್ ಪಾಯಿಂಟ್ ಮತ್ತು ದಾದರಿನ ಕಡಲ ತಟದಲ್ಲಿ ತೇಲಿ ಬಂದಾಗ ಜನ ಮಮ್ಮಲ ಮರುಗಿದರು. ಬ್ರೆಝಿಲ್‌ನ ಜೌಗುಪ್ರದೇಶ ಪೆಂಟಾನಾಲ್‌ನಲ್ಲಿ ಕೈಗೊಂಡ ಸಂರಕ್ಷಣಾ ಕಾರ್ಯಗಳಿಂದ ಅಲ್ಲಿಯ ಜಾಗ್ವಾರ್‌ಗಳ ಸಂಖ್ಯೆ ಹೆಚ್ಚಾದಾಗ ಖುಷಿಪಟ್ಟರು. ಜಮ್ಮು ಕಾಶ್ಮೀರದಲ್ಲಿ ಸರ್ಕಾರ ಹಣ್ಣಿನ ಮರಗಳಿಗೆ ಸಿಂಪಡಿಸುವ ಕೀಟನಾಶಕಗಳನ್ನು ನಿಯಂತ್ರಿಸಲು ಪ್ರಾಧಿಕಾರವೊಂದನ್ನು ಸ್ಥಾಪಿಸಿದಾಗ ಸ್ವಾಗತಿಸಿದರು.

ಇಂತಹ ಸುದ್ದಿಗಳಿಂದ ಒಂದಂತೂ ವೇದ್ಯ. ಹಿಂದೆಂದಿಗಿಂತಲೂ ಇಂದು ಪರಿಸರ ಪ್ರಮುಖ ಸ್ಥಾನ ಪಡೆಯುತ್ತಿದೆ. ಇದುವರೆಗೆ ಮತಿವಂತ ಮಾನವನ ವಿವೇಚನಾರಹಿತ ಕಾರ್ಯ ಚಟುವಟಿಕೆಗಳಿಗೆ ಪರಿಸರ ಸಾಕಷ್ಟು ಬಲಿಯಾಗಿದೆ. ಇದು ತನ್ನದೇ ಭವಿಷ್ಯಕ್ಕೆ ತಾನೇ ಹಾಕಿಕೊಂಡ ಕೊಡಲಿಯೇಟು ಎನ್ನುವುದು ಮಾನವನಿಗೆ ಮನದಟ್ಟಾಗಿದ್ದು, ಇನ್ನು ಮುಂದಾದರೂ ಭೂಮಿ, ಅದರ ಮೇಲಿನ ಪರಿಸರ ರಕ್ಷಣೆಗೆ ಒಂದಿಷ್ಟು ಕೊಡುಗೆ ನೀಡುವ ಆಲೋಚನೆಗಳು ಹುಟ್ಟಿಕೊಂಡಿವೆ.

ಇಂತಹ ಸಂದರ್ಭದಲ್ಲಿ ಮತ್ತೆ ಬಂದಿದೆ 'ವಿಶ್ವಪರಿಸರ ದಿನ'. ಈ ಬಾರಿಯ ವಿಶ್ವಪರಿಸರ ದಿನದ ಧ್ಯೇಯ ವಾಕ್ಯ 'ಜಗವೊಂದೇ ಪರಿಸರವೊಂದೇ' (one world one environment).

'ಇರುವುದೊಂದೇ ಭೂಮಿ' ಎಂಬ ಧ್ಯೇಯ ವಾಕ್ಯದೊಂದಿಗೆ ಮೊಟ್ಟ ಮೊದಲ ವಿಶ್ವ ಪರಿಸರ ದಿನವನ್ನು ವಿಶ್ವಸಂಸ್ಥೆ 1973 ರಲ್ಲಿ ಆಚರಿಸಿತು. ಅಂದಿನಿಂದ ಪ್ರತಿ ವರ್ಷ ಜೂನ್ 5ನ್ನು ವಿಶ್ವಪರಿಸರ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಜಗತ್ತಿನ ನೂರಕ್ಕೂ ಹೆಚ್ಚು ರಾಷ್ಟ್ರಗಳು ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತವೆ. ಪರಿಸರ ಸಂಬಂಧಿ ವಿಷಯಗಳಾದ ಅರಣ್ಯ, ಆಹಾರ, ಜೀವವೈವಿಧ್ಯ, ನೀರು, ನೆಲ, ವನ್ಯಜೀವಿ, ಜಾಗತಿಕ ತಾಪಮಾನ, ಹವಾಮಾನ ಇತ್ಯಾದಿ ವಿಷಯಗಳ ಕಡೆಗೆ ಜನರು, ಆಡಳಿತಗಾರರು, ನೀತಿ ನಿರ್ಮಾಪಕರ ಗಮನ ಸೆಳೆದು ಜಾಗೃತಿಯನ್ನು ಮೂಡಿಸಿ ಕಾರ್ಯ ಪ್ರವೃತ್ತರಾಗುವಂತೆ ಮಾಡುವುದೇ ಈ ಆಚರಣೆಯ ಉದ್ದೇಶ.

ಕಳೆದ ವರ್ಷ ಅಂದರೆ 2014 ರಲ್ಲಿ 'ನಿಮ್ಮ ದನಿಯನ್ನು ಏರಿಸಿ, ಸಾಗರದ ಮಟ್ಟವನ್ನಲ್ಲ' ಎಂಬ ಧ್ಯೇಯ ವಾಕ್ಯದೊಂದಿಗೆ ಈ ದಿನವನ್ನು ಆಚರಿಸಲಾಗಿತ್ತು. ಆಗ ಜಗತ್ತಿನಾದ್ಯಂತ 6,437 ಪ್ರಮಾಣವಚನ ಸಮಾರಂಭಗಳೂ, 3000ಕ್ಕೂ ಹೆಚ್ಚು ಕಾರ್ಯ ಚಟುವಟಿಕೆಗಳೂ ನಡೆದವು. ಇದು ಅದರ ಹಿಂದಿನ ವರ್ಷಗಳಿಗಿಂತ ಮೂರುಪಟ್ಟು ಹೆಚ್ಚಾಗಿತ್ತು. ಈ ಬಾರಿ ಇನ್ನೂ ಹೆಚ್ಚಿನ ಪ್ರತಿಫಲವನ್ನು ನಿರೀಕ್ಷಿಸಲಾಗಿದೆ. 2015ರ ಡಿಸೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ನಡೆಯಲಿರುವ 'ಪೃಥ್ವಿ ಸಮ್ಮೇಳನ'ವನ್ನು ದೃಷ್ಟಿಯಲ್ಲಿಟ್ಟುಕೊಂಡು



ಸೂಕ್ತ ಕ್ರಮಗಳಿಂದ ಜಾಗ್ವಾರ್ ಸಂಖ್ಯೆಯಲ್ಲಿ ಹೆಚ್ಚಳ

ಆಚರಣೆಗಳು ಸಂಘಟಿತವಾಗಿವೆ.

## ಇಡೀ ಜಗತ್ತಿಗಿರುವ ಪರಿಸರ ಒಂದೇ

ನಮ್ಮೂರ ಪರಿಸರಕ್ಕೂ ಪಕ್ಕದೂರಿನ ಪರಿಸರಕ್ಕೂ ವ್ಯತ್ಯಾಸವಿದೆ. ಮರುಭೂಮಿ, ತಂಡ್ರಾ ಹುಲ್ಲುಗಾವಲು, ಮಳೆಕಾಡು, ದ್ವೀಪಗಳು, ಪರ್ವತಗಳು ಮುಂತಾದ ಬೇರೆ ಬೇರೆ ಆವಾಸಗಳಲ್ಲಿಯ ಪರಿಸರ ಬೇರೆ ಬೇರೆಯೇ ಆಗಿರುವುದು ನಮಗೆಲ್ಲಾ ಕಂಡುಬರುವ ವಿಷಯ. ಹೀಗಿದ್ದಾಗ ಭೂಮಿಯ ಮೇಲಿರುವ ನಮ್ಮೆಲ್ಲರಿಗೂ ಪರಿಸರ ಒಂದೇ ಆಗಲು ಹೇಗೆ ಸಾಧ್ಯ?

ನಮ್ಮ ಸುತ್ತಮುತ್ತಲೂ ಇರುವ ಪ್ರಾಣಿ, ಪಕ್ಷಿ, ಕೀಟಗಳ ಜೊತೆಗೆ ನದಿ, ಸಾಗರ, ಸರೋವರ, ಪರ್ವತಗಳಿವೆ. ಗಾಳಿ, ಬೆಳಕು, ಖನಿಜ ಸಂಪನ್ಮೂಲಗಳೂ ಇವೆ. ಇವೆಲ್ಲವನ್ನೂ ಸೇರಿಸಿ 'ಪರಿಸರ' ಎನ್ನುತ್ತೇವೆ. ಈ ಪರಿಸರದಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಜೀವಿ ಸಮೂಹ. ಎರಡನೆಯದು ನಿರ್ಜೀವ ವಸ್ತುಗಳು. ನಿರ್ಜೀವ ವಸ್ತುಗಳೆಲ್ಲ ಸೇರಿ 'ಭೌತ ಪರಿಸರ'ವನ್ನುಂಟು ಮಾಡಿದರೆ ಜೀವಿ ಸಮುದಾಯ 'ಜೀವಿ ಪರಿಸರ'ವನ್ನುಂಟು ಮಾಡುತ್ತದೆ. ಭೌತ ಪರಿಸರದಲ್ಲಿ ಹೆಚ್ಚಿನ ವೈವಿಧ್ಯವಿಲ್ಲ. ಆದರೆ ಜೀವಿ ಪರಿಸರದಲ್ಲಿ ಅಪಾರ ವೈವಿಧ್ಯವಿದೆ. ಇವೆರಡೂ ಒಂದರ ಮೇಲೆ ಇನ್ನೊಂದು ಪ್ರಭಾವ ಬೀರುತ್ತವೆ. ಎಲ್ಲಿಯವರೆಗೆ ಈ ಪ್ರಭಾವದಲ್ಲಿ ಒಂದು ಸಮತೋಲನವಿರುತ್ತದೋ ಅಲ್ಲಿಯವರೆಗೆ ಎಲ್ಲವೂ ಸುಗಮವೂ ಸುರಕ್ಷಿತವೂ ಆಗಿತ್ತು.

ಭೂಮಿಯ 12,800 ಕಿ.ಮೀ.ಗಳ ವ್ಯಾಸಕ್ಕೆ ಹೋಲಿಸಿದರೆ, ಕೇವಲ 16 ಕಿ.ಮೀ. ನಷ್ಟು ತೆಳುವಾದ ವ್ಯಾಸದ ಭಾಗದ ಜೀವಗೋಳದಲ್ಲಿ ಸುಮಾರು 5 ಕೋಟಿ ಜೀವಿ ಪ್ರಭೇದಗಳಿವೆ. ಜೀವಗೋಳದಲ್ಲಿ ಪ್ರತಿಯೊಂದು ಪ್ರಭೇದದ ಜೀವಿಗೂ ತನ್ನದೇ ಆದ ವಿಶಿಷ್ಟ ದೇಹ ರಚನೆಯಿದೆ. ಜೀವನ ಕ್ರಮವಿದೆ. ಇದರಿಂದ ಆ ಜೀವಿ ತನ್ನದೇ ಆದ ವಿಶಿಷ್ಟ ಜಾಗದಲ್ಲಿ ವಾಸಿಸುತ್ತದೆ. ಜೀವಿ ಸ್ವಾಭಾವಿಕವಾಗಿ ವಾಸ ಮಾಡುವ ಈ ಜಾಗವನ್ನು ಅದರ ಆವಾಸ ಅಥವಾ ನೆಲೆ ಎಂದು ಕರೆಯುತ್ತೇವೆ. ಒಂದು ಆವಾಸದಲ್ಲಿ ಹಲವಾರು ಪ್ರಾಣಿ ಸಸ್ಯಗಳು ಇದ್ದು ಅವು ಅಲ್ಲಿಯ 'ಜೀವಿ ಸಮುದಾಯ'ವನ್ನು ಸೃಷ್ಟಿಸುತ್ತವೆ. ಈ ರೀತಿಯ ಪ್ರತಿ ಸಮುದಾಯದಲ್ಲೂ ಕೆಲವು ಪ್ರಬಲ ಜೀವಿಗಳಿರುತ್ತವೆ. ಇವು ಸಮುದಾಯದ ಉಳಿದ ಜೀವಿಗಳ ಜೀವನ ಕ್ರಮದ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತವೆ. ಈ ಪ್ರಬಲ ಜೀವಿಗಳು ಸೃಷ್ಟಿಸುವ ಪರಿಸರಕ್ಕೆ ಹೊಂದಿಕೊಂಡು ಬಾಳುವಂತಹ ಜೀವಿಗಳು ಮಾತ್ರ ಅಂತಹ ಸಮುದಾಯದಲ್ಲಿ ಬದುಕುತ್ತವೆ.

ಜೀವಗೋಳದ ಪ್ರತಿಯೊಂದು ನೆಲೆಯನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ಮಾರ್ಪಾಟು ಮಾಡಿಕೊಂಡು ಬದುಕಬಲ್ಲ ಸಾಮರ್ಥ್ಯವಿರುವ ಏಕೈಕ ಜೀವಿಯೆಂದರೆ ಮಾನವ. ಮಾನವ ಇಡೀ ಜೀವಗೋಳದ ಪ್ರಬಲ ಪ್ರಭೇದವೂ ಹೌದು. ಹೀಗಾಗಿ ಮಾನವನಿಂದ ಜೀವಗೋಳದ ಉಳಿದ ಜೀವಿಗಳಿಗಾಗುತ್ತಿರುವ ಹಿಂಸೆ ತೊಂದರೆಗಳು ಅಷ್ಟಿಷ್ಟಲ್ಲ.

ಜೀವ ರಹಿತವಾದ ಕಲ್ಲು ಬಂಡೆಯೊಂದು ಸಹಸ್ರಾರು ವರ್ಷಗಳ ಕಾಲ, ಗಾಳಿ, ಮಳೆಗಳ ಹೊಡೆತಕ್ಕೆ ಈಡಾಗಿ, ಸೂರ್ಯನ ಶಾಖಕ್ಕೆ ಹಿಗ್ಗಿ, ಶೈತ್ಯಕ್ಕೆ ಕುಗ್ಗುತ್ತದೆ. ಇದರಿಂದ ಅದರಲ್ಲಿ ಕ್ರಮೇಣ ಬಿರುಕುಗಳು ಕಾಣಿಸಿಕೊಳ್ಳುತ್ತವೆ. ಈ ಬಿರುಕಿನಲ್ಲಿ ಬಂಡೆಗಲ್ಲಿನ ಸಣ್ಣ ಸಣ್ಣ ಕಣಗಳು ಸಂಗ್ರಹವಾಗುತ್ತವೆ. ಮಳೆಯಲ್ಲಿನ ಕಾರ್ಬಾನಿಕ್ ಆಮ್ಲ ಬಂಡೆಯಲ್ಲಿನ ಖನಿಜಾಂಶವನ್ನು ಕರಗಿಸಿ ಬಿರುಕಿನಲ್ಲಿ ಶೇಖರಗೊಳ್ಳುವಂತೆ ಮಾಡುತ್ತದೆ.

## ಮೊದಲ ಜೀವಿ

ಈ ಬೋಳು ಬಂಡೆಯ ಬಿರುಕಿನಲ್ಲಿ ಕಾಣಿಸಿಕೊಳ್ಳುವ ಮೊದಲ ಜೀವಿಯಂದರೆ ಕಲ್ಲು ಹೂ ಅಥವಾ ಶಿಲಾವಲ್ಕ (ಲೈಕೆನ್). ಗಾಳಿಯಲ್ಲಿ ತೂರಿ ಬಂದ ಇದರ ಬೀಜಾಣುಗಳು ಬಂಡೆಗಳ ಕೊರಕಲಿನಲ್ಲಿ ಇಳಿದು, ಹರಡಿ, ಖನಿಜಾಂಶವನ್ನು ಬಳಸಿಕೊಂಡು ಮತ್ತಷ್ಟು ಕಲ್ಲನ್ನು ಕರಗಿಸುತ್ತವೆ. ಹಲವಾರು ವರ್ಷಗಳ ನಂತರ ಶಿಲಾವಲ್ಕಗಳು ಅಲ್ಲಿ ನೆಲೆಯೂರುತ್ತವೆ. ಪ್ರತಿಯೊಂದು ಶಿಲಾವಲ್ಕ ಸತ್ತಾಗಲೂ ಅದರಲ್ಲಿನ ಸಾವಯವ ಪದಾರ್ಥಗಳು ಕೊಳೆತು 'ಹ್ಯೂಮಸ್' ಆಗಿ ಪರಿವರ್ತನೆಯಾಗುತ್ತವೆ. ಅತಿ ಸಣ್ಣ ಕಣಗಳ ಧೂಳು ಮತ್ತು ಹ್ಯೂಮಸ್ ಸೇರಿ ತೆಳುವಾದ ಮಣ್ಣಿನ ಪದರವೊಂದು ಸೃಷ್ಟಿಯಾಗುತ್ತದೆ. ಈ ಮಣ್ಣು ಜೇಡ, ಇರುವೆಗಳಂತಹ ಜೀವಿಗಳಿಗೆ ನೆಲೆಯಾಗುತ್ತದೆ.

ಪ್ರಾಣಿ ಜೀವಿ, ಸಸ್ಯಜೀವಿಗಳ ಈ ಪ್ರಪ್ರಥಮ ಸಮುದಾಯವನ್ನು 'ಆದಿ ಪ್ರವರ್ತಕ ಸಮುದಾಯ' (ಪಯೋನೀರ್ ಕಮ್ಯುನಿಟಿ) ಎನ್ನುತ್ತಾರೆ. ಈ ಸಮುದಾಯಕ್ಕೆ ನಿಸರ್ಗದ ಕಾಠಿಣ್ಯಗಳನ್ನು ಎದುರಿಸಿ ನಿಲ್ಲುವ ಸಾಮರ್ಥ್ಯವಿರುತ್ತದೆ. ಇವು ಅಲ್ಲಿ ನೆಲೆ ನಿಂತು ಮಣ್ಣಿನ ಪದರ ಸಾಕಷ್ಟು ದಪ್ಪವಾದಾಗ ಹಾವಸೆ ಮತ್ತು ಇನ್ನಿತರ ಸಸ್ಯಗಳು, ನಂತರ ಸೂಕ್ಷ್ಮ ಜೀವಿ, ಬೂಸ್ಟು, ಶೈವಲ (ಆಲ್ಗೆ)ಗಳು ಮೂಡುತ್ತವೆ. ನಂತರ ಕಾಣಿಸಿಕೊಂಡ ಹುಲ್ಲು ಉಳಿದವುಗಳಿಗಿಂತ ಎತ್ತರವಾಗಿ ಬೆಳೆದು ನೀರಿನ ಆವಿಯನ್ನು ತಡೆದು ನೀರು ಆವಿಯಾಗುವ ಪ್ರಮಾಣವನ್ನು ಕಡಿಮೆ ಮಾಡಿ ನೆರಳನ್ನೂ, ಮರೆಯನ್ನೂ ಒದಗಿಸುತ್ತದೆ. ಇದರಿಂದ ತೇವಾಂಶ, ನೆರಳುಗಳು ಬೇಕಿರುವ ಪೊದರುಗಳು ಬೆಳೆಯಲು ಪ್ರಾರಂಭವಾಗುತ್ತವೆ. ಪೊದರುಗಳು ಮಣ್ಣನ್ನು ಹಿಡಿದಿಡುವುದರಿಂದ ಸಾವಕಾಶವಾಗಿ ಮಣ್ಣಿನ ಪದರ ದಪ್ಪವಾಗುತ್ತದೆ, ಫಲವತ್ತಾಗುತ್ತದೆ. ಇದು ಮರಗಿಡಗಳ ಪ್ರವೇಶಕ್ಕೆ ನಾಂದಿಯಾಗುತ್ತದೆ. ಕ್ರಮೇಣ ಪ್ರಾಣಿ ಜೀವಿಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ.

ಈ ರೀತಿ ಸುಮಾರು 2.5 ಸೆ.ಮೀ.ನಷ್ಟು ಮೇಲ್ಮಣ್ಣು ಸೃಷ್ಟಿಯಾಗಲು 600 ರಿಂದ 1000 ವರ್ಷಗಳು ಬೇಕು. ಇಂತಹದೇ ಬೆಳವಣಿಗೆ ಕಾಡೊಂದರ ಬೆಳವಣಿಗೆಯಲ್ಲಿ ಪರಾಕಾಷ್ಠೆಯನ್ನು ತಲುಪುತ್ತದೆ. ಆದರೆ ಆ ಕಾಡನ್ನು ಕಡಿದು ಮತ್ತೆ ಬೋಳು ಭೂಮಿಯನ್ನು ಸೃಷ್ಟಿಸಲು ಮಾನವನಿಗೆ ಇಂದಿನ ವಿಜ್ಞಾನ ತಂತ್ರಜ್ಞಾನದ ಅಧುನಿಕ ಯುಗದಲ್ಲಿ ಕೇವಲ ಕೆಲವು ದಿನಗಳು ಸಾಕು.

ಮಾನವ ತನ್ನ ಸುತ್ತಲಿನ ಪರಿಸರದಲ್ಲಿ ಉಂಟು ಮಾಡುವ ಬದಲಾವಣೆಗಳು ಆರಂಭದಲ್ಲಿ ಆ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದರೂ ಕೂಡಾ, ಅದರ ಪರಿಣಾಮಗಳು ಯಾವುದೇ ಗಡಿಗೆ ಸೀಮಿತವಾಗಿಲ್ಲ. ಅದರ ಪ್ರತಿಫಲವನ್ನು ಇಡಿಯ ಜಗತ್ತಿನಲ್ಲಿರುವ ಜನರು ಅನುಭವಿಸಬೇಕಾಗುತ್ತದೆ. ಉದಾ: ಕೆಲವೇ ಕೆಲವು ರಾಷ್ಟ್ರಗಳು ಅಭಿವೃದ್ಧಿಯ ನಾಗಾಲೋಟದಲ್ಲಿ ಸಾಗಿ, ಕೈಗಾರಿಕೆಗಳನ್ನು ಸ್ಥಾಪಿಸಿದುದರ ಫಲವಾಗಿ ಇಂದು ಇಡಿಯ ಭೂಮಿ 'ಜಾಗತಿಕ ತಾಪಮಾನದ ಏರಿಕೆ'ಯ ಬಿಸಿಯನ್ನು ಅನುಭವಿಸಬೇಕಾಗಿ ಬಂದಿದೆ. ಅದರಿಂದಾಗುವ ಹವಾಮಾನ ಬದಲಾವಣೆಯ ಪರಿಣಾಮ ಯಾರನ್ನೂ ಬಿಟ್ಟಿಲ್ಲ. ಆದುದರಿಂದಲೇ ಈ ಬಾರಿಯ ವಿಶ್ವಪರಿಸರ ದಿನದಂದು ಇಡಿಯ ಜೀವ ಸಮುದಾಯಕ್ಕಿರುವ ಪರಿಸರವನ್ನು 'ಒಂದೇ' ಎಂದು ಪರಿಗಣಿಸಿ ಸಂರಕ್ಷಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ.

## ಮಾರಕ ಇಂಗಾಲದ ಡೈಆಕ್ಸೈಡ್

ಈ ನಿಟ್ಟಿನಲ್ಲಿ ನಮ್ಮ ಮೊದಲ ಪ್ರಯತ್ನ ವಾಯು ಮಂಡಲವನ್ನು ಸೇರುತ್ತಿರುವ ಇಂಗಾಲದ ಡೈಆಕ್ಸೈಡಿನ ಪ್ರಮಾಣವನ್ನು ತಗ್ಗಿಸುವುದಾಗಿದೆ. ಪ್ರಯೋಗಗಳು ಹಾಗೂ ಅಧ್ಯಯನಗಳ ಪ್ರಕಾರ ನಾವು ಕಳೆದ ಒಂದೂವರೆ ಶತಮಾನದಲ್ಲಿ ವಾಯು ಮಂಡಲಕ್ಕೆ ಸೇರಿಸಿರುವ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಶೇ. 35 ರಷ್ಟು ಹೆಚ್ಚಾಗಿದೆ. ಇದು ಇತರ ಹಸಿರು ಮನೆ ಅನಿಲಗಳಾದ ಮಿಥೇನ್ ಹಾಗೂ ನೈಟ್ರಸ್ ಆಕ್ಸೈಡ್‌ಗಳ ಪ್ರಮಾಣವನ್ನೂ ಹೆಚ್ಚಿಸಿದೆ. ಇದಕ್ಕಾಗಿ ಅಪಾರ ಪ್ರಮಾಣದ ಕಲ್ಲಿದ್ದಲು, ಅನಿಲ. ಪೆಟ್ರೋಲಿಯಂ ಉತ್ಪನ್ನಗಳ ದಹನ ಕ್ರಿಯೆ ನಡೆದಿದೆ.



ಅಳಿವಿನಂಚಿನಲ್ಲಿ ಡಾಲ್ಫಿನ್

IPCC (ಇಂಟರ್ ಗವರ್ನ್‌ಮೆಂಟ್ ಪ್ಯಾನೆಲ್ ಆನ್ ಕ್ಲೈಮೇಟ್ ಚೇಂಜ್)ಯ ನಾಲ್ಕನೆಯ ವರದಿಯ ಪ್ರಕಾರ ಕೈಗಾರಿಕಾ ಕ್ರಾಂತಿಯ ಮುಂಚೆಗಿಂತ ಈ ವಾಯುಮಂಡಲವನ್ನು ಸೇರಿರುವ ಇಂಗಾಲದ ಡೈಆಕ್ಸೈಡ್‌ನ ಪ್ರಮಾಣ 280 PPM (ಪಿಪಿಎಂ– ಒನ್ ಪಾರ್ಟ್ ಪರ್ ಮಿಲಿಯನ್) ನಿಂದ 379 PPMಗೆ ಏರಿದೆ. ಏರುತ್ತಲೇ ಇದೆ. ಸದ್ಯದ ಪರಿಸ್ಥಿತಿಯಲ್ಲಿ 3000 ಗಿಗಾ ಟನ್‌ನಷ್ಟು ಇಂಗಾಲದ ಡೈಆಕ್ಸೈಡ್ ವಾಯುಮಂಡಲವನ್ನು ಸೇರುತ್ತಿದೆ. ಪ್ರತಿ ವ್ಯಕ್ತಿ ವರ್ಷವೊಂದಕ್ಕೆ 400 ಕೆ.ಜಿ. ಇಂಗಾಲದ ಡೈಆಕ್ಸೈಡನ್ನು ವಾಯುಮಂಡಲಕ್ಕೆ ಸೇರಿಸುತ್ತಿದ್ದಾನೆ ಅಥವಾ 68 ಕೆ.ಜಿ. ತೂಕದ ವ್ಯಕ್ತಿ ಪ್ರತಿ ವಾರ ತನ್ನ ತೂಕದಷ್ಟು ಇಂಗಾಲದ ಡೈಆಕ್ಸೈಡನ್ನು ವಾಯು ಮಂಡಲಕ್ಕೆ ಸೇರಿಸುತ್ತಿದ್ದಾನೆ.

ಆದರೆ ಈ ಅಂಕಿ ಅಂಶಗಳು ಎಲ್ಲ ದೇಶಗಳ ಜನರಿಗೆ ಒಂದೇ ಸಮನಾಗಿಲ್ಲ. ಅಮೆರಿಕಾದ ಪ್ರಜೆ ಹೊರಹಾಕುವಷ್ಟೇ ಪ್ರಮಾಣದ ಇಂಗಾಲದ ಡೈಆಕ್ಸೈಡನ್ನು ಭಾರತದ ಪ್ರಜೆ ಹೊರಹಾಕುವುದಿಲ್ಲ. ಆದರೆ ದೇಶ ದೇಶಗಳ ನಡುವಿನ ಗಡಿ ವಾಯು ಮಂಡಲದಲ್ಲಿ ಇಲ್ಲ. ವಾಯು ಮಂಡಲಕ್ಕೆ ಸೇರಿದ ನಂತರ ನೂರು ವರ್ಷಗಳಷ್ಟು ಕಾಲದವರೆಗೆ ಉಳಿಯ ಬಲ್ಲ ಇಂಗಾಲದ ಡೈಆಕ್ಸೈಡ್ ಭೂಮಿಯ ಸುತ್ತಲೂ ಆವರಿಸಿಕೊಳ್ಳುತ್ತದೆ. ಇದರಿಂದ ಇಂಗಾಲವನ್ನು ಉರಿಸಿದ ದೇಶ ಮಾತ್ರ ಅದರ ಪರಿಣಾಮವನ್ನು ಅನುಭವಿಸುತ್ತದೆ ಎಂದು ಹೇಳುವಂತಿಲ್ಲ. ಕೈಗಾರಿಕೆಗಳಿಂದ ಶೇ. 40, ಕಟ್ಟಡಗಳಿಂದ ಶೇ. 31, ಸಾರಿಗೆಯಿಂದ ಶೇ. 27, ಕೃಷಿಯಿಂದ ಶೇ. 4 ಸರಾಸರಿಯಷ್ಟು ಇಂಗಾಲದ ಡೈಆಕ್ಸೈಡ್ ವಾಯು ಮಂಡಲವನ್ನು ಸೇರುತ್ತಿದೆ. ಇದನ್ನು ಇಳಿಸುವ ನೈತಿಕ ಜವಾಬ್ದಾರಿ ಇಂದು ಮುಂದುವರಿದ ರಾಷ್ಟ್ರಗಳ ಮೇಲೆ ಇದೆ. ಅದಕ್ಕಾಗಿಯೇ ಹಲವಾರು ಅಂತರಾಷ್ಟ್ರೀಯ ಪ್ರಯತ್ನಗಳು ನಡೆಯುತ್ತಿವೆಯಾದರೂ ಯಶಸ್ವಿಯಾಗಿವೆ ಎಂದು ಹೇಳುವಂತಿಲ್ಲ.

ವೈಯಕ್ತಿಕ ಹಂತದಲ್ಲಿ, ಸಮೂಹಗಳ ಹಂತದಲ್ಲಿ ಪ್ರಯತ್ನಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಒಂದೆಡೆ ವಾಯು ಮಂಡಲಕ್ಕೆ ಇಂಗಾಲದ ಡೈಆಕ್ಸೈಡ್ ಸೇರಿಸುತ್ತಾ, ಇನ್ನೊಂದೆಡೆ ಅದನ್ನು ಹಿರಿಕೊಳ್ಳುವ ಮರಗಿಡಗಳನ್ನು ನಾಶ ಮಾಡುತ್ತಾ ನಾವು ಸಮಸ್ಯೆಯನ್ನು ಮತ್ತೂ ತೀವ್ರಗೊಳಿಸುತ್ತಿದ್ದೇವೆ. ಇದು ಜಾಗತಿಕ ಪರಿಸರದ ಅಸಮತೋಲನಕ್ಕೆ ಕಾರಣವಾಗುತ್ತದೆ.

ನಮ್ಮ ಜೀವನದ ಗುಣಮಟ್ಟ ನಮ್ಮ ಮೂಲಭೂತ ಅವಶ್ಯಕತೆಗಳಾದ ಶುದ್ಧವಾದ ಗಾಳಿ, ನೀರು, ಆಹಾರ, ವಸತಿ ಮುಂತಾದವುಗಳನ್ನು ಅವಲಂಬಿಸಿದೆ. ಪ್ರತಿಯೊಂದು ಬೆಳೆದು ನಿಂತ ಮರವೂ 200 ಜನರಿಗೆ ಬೇಕಾದಷ್ಟು ಆಮ್ಲಜನಕವನ್ನು ಉತ್ಪಾದಿಸುತ್ತದೆ. ನಮ್ಮ ಬೆಂಗಳೂರಿನಲ್ಲಿರುವ ಇಂಗಾಲದ ಡೈಆಕ್ಸೈಡಿನ ಪ್ರಮಾಣವನ್ನು ತೆಗೆದುಕೊಂಡರೆ ಇಲ್ಲಿ ಪ್ರತಿ ಮನುಷ್ಯನಿಗೆ 8 ಮರಗಳಿದ್ದಲ್ಲಿ ಅವನು ಆರೋಗ್ಯವಂತನಾಗಿರಬಲ್ಲ. ಆದರೆ ಪರಿಸ್ಥಿತಿ ಬೇರೆಯೇ ಆಗಿದೆ. ಇಲ್ಲಿರುವ 7 ಜನರಿಗೆ ಒಂದು ಮರವಿದೆ!

ಮರಗಿಡಗಳಿಂದ ಕೂಡಿರುವ ದಟ್ಟವಾದ ಅರಣ್ಯ ಬೀಳುವ ಹನಿಗಳನ್ನು ತಡೆದು ಅವುಗಳ ರಭಸವನ್ನು ಕಡಿಮೆ ಮಾಡುತ್ತದೆ. ಇದರಿಂದ ನೆಲಕ್ಕೆ ಬಿದ್ದ ನೀರು ಮಣ್ಣನ್ನು ಕೊಚ್ಚಿಕೊಂಡು ಹೋಗುವುದಿಲ್ಲ. ಇದರೊಂದಿಗೆ ಮರಗಿಡಗಳು ನೆಲದ ಸಚ್ಛಿದ್ರತೆಯನ್ನು ಹೆಚ್ಚಿಸಿ, ಬಿದ್ದ ನೀರು ತ್ವರಿತವಾಗಿ ನೆಲದೊಳಗೆ ಇಂಗುವಂತೆ ಮಾಡುತ್ತವೆ. ಆದ್ದರಿಂದ ಬಿದ್ದ ನೀರೆಲ್ಲ ಒಟ್ಟಿಗೇ ಹರಿದು ಹೋಗುವುದಿಲ್ಲ. ಅದರ ಬದಲಿಗೆ ನೆಲದಲ್ಲಿ ಇಂಗಿ ಅಂತರ್ಜಲವಾಗುತ್ತದೆ. ಇದರಿಂದಾಗಿ ನದಿ, ತೊರೆಗಳು ವರ್ಷವಿಡೀ ಬತ್ತುವುದಿಲ್ಲ.

ನಾವು ಈಗಾಗಲೇ ನೋಡಿರುವಂತೆ ಒಂದು ಅಂಗುಲದಷ್ಟು ದಪ್ಪದ ಮೇಲ್ಮಣ್ಣು ರೂಪುಗೊಳ್ಳಲು 600–1000 ವರ್ಷಗಳು ಬೇಕು. ಇಂತಹ ಫಲವತ್ತಾದ ಮಣ್ಣು ನಾಶವಾಗದಂತೆ ರಕ್ಷಿಸಿ, ಹೊಸ ಪದರಗಳ ನಿರ್ಮಾಣ ಸಾಧ್ಯವಾಗುವಂತೆ ಮಾಡುವುದು ಅರಣ್ಯಗಳು, ಗಿಡ ಮರಗಳು. ಹೀಗಾಗಿ ಇರುವ ಅರಣ್ಯಗಳನ್ನು ರಕ್ಷಿಸುವ, ಬರಡು ಭೂಮಿಯಲ್ಲಿ ಗಿಡ ಮರಗಳನ್ನು ಬೆಳೆಸುವ ಕಾರ್ಯ ಅತ್ಯಂತ ಅವಶ್ಯಕವಾಗಿ ನಡೆಯಬೇಕಾಗಿದೆ. ಅಭಿವೃದ್ಧಿಯ



ಪ್ಲಾಸ್ಟಿಕ್ ತ್ಯಾಜ್ಯ ಪರಿಸರಕ್ಕೆ ಮಾರಕ

ಹೆಸರಿನಲ್ಲಿ ನಾವು ಮಾಡುತ್ತಿರುವ ಅರಣ್ಯ ನಾಶ ನಮ್ಮ ಪರಿಸರಕ್ಕೆ ಹಾಗೂ ಭೂಮಿಯ ಮೇಲಿರುವ ಎಲ್ಲ ಜೀವಿಸಂಕುಲಕ್ಕೆ ಮಾರಕವಾಗುತ್ತಿದೆ. ಈ ನಿಟ್ಟಿನಲ್ಲಿ ಮತ್ತೆ ಮತ್ತೆ ಹೊಸ ಪ್ರಯತ್ನಗಳು ನಡೆಯುವ ಜಾಗೃತಿಯನ್ನು ಮೂಡಿಸುವ ಅವಶ್ಯಕತೆ ಇದೆ. ಇದು ಈ ಬಾರಿಯ ವಿಶ್ವ ಪರಿಸರ ದಿನದ ಧ್ಯೇಯ ವಾಕ್ಯದೊಂದಿಗೆ ತೀವ್ರಗೊಳ್ಳಬೇಕಾಗಿದೆ.

## ಜೀವಿ ಪ್ರಭೇದದ ನಾಶ

ನಮ್ಮ ಪಶ್ಚಿಮ ಘಟ್ಟಗಳಲ್ಲಿ ನಾವು ಅರಿಯುವ ಎಷ್ಟೋ ಜೀವಿ ಪ್ರಭೇದಗಳಿವೆ. ಈ ಆವಾಸಗಳ ನಾಶ ಅವುಗಳ ನಾಶವೂ ಹೌದು. ಕಾಲದಿಂದ ಕಾಲಕ್ಕೆ ಭೂಮಿಯ ಮೇಲಿರುವ ಜೀವಿ ಪ್ರಬೇಧಗಳು ಕಣ್ಮರೆಯಾಗುತ್ತ ಬಂದಿರುವುದು ಹೊಸ ವಿಷಯವೇನಲ್ಲ. ಹಾಗೆಯೇ ಹೊಸ ಜೀವಿಗಳೂ ಉದಯವಾಗಿರುವುದುಂಟು. ಜೀವಿ ವಿಕಾಸದ ಕ್ರಿಯೆಯಲ್ಲಿ ಇವು ಸಹಜ ಕ್ರಿಯೆಗಳು. ಕ್ರಿ.ಶ. 1600 ರವರೆಗೆ ಹೆಚ್ಚು ಕಡಿಮೆ ಪ್ರತಿ 100 ವರ್ಷಗಳಿಗೆ ಒಂದು ಜೀವಿ ಪ್ರಭೇದ ಕಣ್ಮರೆಯಾಗುತ್ತಿತ್ತು. 1600 ರಿಂದ 1950ರ ಅವಧಿಯಲ್ಲಿ ಸರಾಸರಿ ಪ್ರತಿ ವರ್ಷಗಳಲ್ಲಿ ಒಂದು ಜೀವಿ ಪ್ರಭೇದ ನಾಶವಾದರೆ, ಇಂದು ಪ್ರತಿ ವರ್ಷ 1 ರಿಂದ 5 ಪ್ರಭೇದಗಳು ಶಾಶ್ವತವಾಗಿ ನಾಶವಾಗುತ್ತಿವೆ ಎನ್ನಲಾಗಿದೆ. ಜೈವಿಕ ವೈವಿಧ್ಯದ ದೃಷ್ಟಿಯಿಂದ ಇದು ಅತ್ಯಂತ ಕಳವಳಕಾರಿಯಾದ ಅಂಶ.

ಜೈವಿಕ ವೈವಿಧ್ಯದ ನಾಶಕ್ಕೆ ಅತ್ಯಂತ ಪ್ರಮುಖ ಕಾರಣವೆಂದರೆ, ಜೀವಿಗಳ ನೈಸರ್ಗಿಕ ನೆಲೆಗಳಿಗೆ ಮಾನವನ ಚಟುವಟಿಕೆಗಳಿಂದಾಗುತ್ತಿರುವ ಅಪಾರ ಹಾನಿ. ನಮ್ಮ ಜೀವನದ ಸುಖಕ್ಕೆ ಬೇಕಾಗಿರುವ ಆಹಾರ, ವಸತಿ, ವಿದ್ಯುತ್, ಸಾರಿಗೆ ಮುಂತಾದ ಸೌಲಭ್ಯಗಳನ್ನು ಪೂರೈಸಲು ಬೆಳೆದು ನಿಂತ ಅರಣ್ಯಗಳನ್ನು ನೆಲಸಮ ಮಾಡಿದ್ದೇವೆ. ಕೃಷಿ ಭೂಮಿ, ಜಲಾಶಯಗಳು, ಕೈಗಾರಿಕೋದ್ಯಮಗಳ ಸ್ಥಾಪನೆಗಾಗಿ ನಿತ್ಯ ಅರಣ್ಯಗಳು ಬಲಿಯಾಗುತ್ತಿವೆ. ಪಶ್ಚಿಮ ಘಟ್ಟದ ಕಾಡುಗಳು, ಕರಾವಳಿಯ ಜೀವಾವಾಸಗಳು, ಹುಲ್ಲುಗಾವಲುಗಳು ಸಂಕುಚಿತಗೊಂಡರೆ ನಮ್ಮ ಕಣ್ಣಿಗೆ ಗೋಚರವಾಗದಂತೆ ಜೈವಿಕ ವೈವಿಧ್ಯ ನಾಶವಾಗುತ್ತಾ ಮುಂದೊಮ್ಮೆ ಅದು ಸರಿಪಡಿಸಲಾಗದ ಹಂತವನ್ನು ತಲುಪಬಹುದು. ಹಾಗಾಗದಂತೆ ತಡೆಯುವ ಪ್ರಯತ್ನ ಇಂದಿನ ಅನಿವಾರ್ಯ ಅವಶ್ಯಕತೆಯಾಗಿದೆ.

ನೊರೆ ತುಂಬಿ ಉಕ್ಕಿದ ವರ್ತೂರು ಕೆರೆ, ತುಂಗಭದ್ರಾ ನದಿಯಲ್ಲಿ ಸತ್ತು ತೇಲಿದ ಮೀನಿನ ರಾಶಿ, ಮುಂಬಯಿಯ ಸಾಗರ ತಟದಲ್ಲಿ ತೇಲಿ ಬಂದ ಡಾಲ್ಫಿನ್‌ಗಳ ಸತ್ತ ಶರೀರಗಳು, ಪರಿಸರ ಮಾಲಿನ್ಯದಿಂದ ಜೀವಿಗಳು, ಜೈವಿಕ ವೈವಿಧ್ಯದ ಮೇಲಾಗುತ್ತಿರುವ ಪರಿಣಾಮದ ಪ್ರತ್ಯಕ್ಷ ನಿದರ್ಶನಗಳು.

ಜೀವಾವಾಸ ವ್ಯವಸ್ಥೆಗೆ ಸೇರುವ ಮಲಿನ ವಸ್ತುಗಳು ಸೂಕ್ಷ್ಮ ಪ್ರಭೇದಗಳನ್ನು ಬಹಳ ಬೇಗ ನಾಶಮಾಡುತ್ತವೆ. ಆಹಾರ ಸರಪಳಿ, ಆಹಾರ ಜಾಲಗಳ ಮೂಲಕ ಪ್ರಾಣಿ ಪ್ರಭೇದಗಳ ದೇಹದಲ್ಲಿ ಸಂಗ್ರಹವಾಗುತ್ತಿರುವ ಕೀಟನಾಶಕಗಳು ತೊಂದರೆಯನ್ನುಂಟು ಮಾಡುತ್ತಿವೆ. ಕೀಟನಾಶಕಗಳ ಪರಿಣಾಮದಿಂದ ಪಕ್ಷಿಗಳ ಮೊಟ್ಟೆಗಳು ತೆಳುವಾಗಿ, ಕಾವು ಕೊಡಲು ಪಕ್ಷಿ ಕುಳಿತ ಕೂಡಲೇ ಒಡೆದು ಹೋಗುತ್ತಿರುವ ಪ್ರಕರಣಗಳು ರಂಗನತಿಟ್ಟು ಹಾಗೂ ಗುಡವಿ ಪಕ್ಷಿಧಾಮಗಳಲ್ಲಿ ಕಂಡುಬಂದಿವೆ. ಈ ಕೀಟನಾಶಕಗಳ ಪ್ರಮಾಣ ಎಷ್ಟೊಂದು ತೀವ್ರವಾಗಿದೆ ಎಂದರೆ ಜಗತ್ತಿನ ಹಲವು ಕಡೆಗಳಲ್ಲಿ ಪರಾಗ ಸ್ಪರ್ಶಕ್ಕೆ ಕಾರಣವಾಗುವ ದುಂಬಿ, ಜೇನುನೊಣಗಳು, ಚಿಟ್ಟೆಗಳು ಇಲ್ಲದೆಯೇ ಹೂ ತಳೆದ ಆಹಾರದ ಬೆಳೆಗಳು ಧಾನ್ಯಗಳಾಗುತ್ತಿಲ್ಲ.

ಪಶ್ಚಿಮ ಘಟ್ಟದ ಕಾಡಿನಲ್ಲಿ 'ಕಾನು ಗೇರು' ಮರ ಅದರ ಪರಾಗಸ್ಪರ್ಶಕ್ಕೆ ಬೇಕಾದ ಪತಂಗವಿಲ್ಲದೇ ವಿನಾಶದಂಚನ್ನು ಸೇರುತ್ತಿದೆ. ಇವು ಇಂದು ಅತ್ಯಂತ ಸಣ್ಣ ಪ್ರಮಾಣದ ಪರಿಣಾಮಗಳು ಎನ್ನಿಸಿದರೂ ಕೂಡಾ, ಅಲ್ಲೊಂದು ಇಲ್ಲೊಂದು ಎಂಬಂತೆ ವರದಿಯಾಗುತ್ತಿದ್ದರೂ ಸಹ ಅಂತಿಮವಾಗಿ ಮನುಕುಲಕ್ಕೆ ಎಚ್ಚರಿಕೆಯ ಗಂಟೆಯನ್ನು ಹೊಡೆಯುತ್ತಿರುವ ಉದಾಹರಣೆಗಳು.

## ಪರಿಸರ ಜಾಗೃತಿ

ನಾಲ್ಕು ದಶಕಗಳಿಗೂ ಹೆಚ್ಚಿನ ಕಾಲದಿಂದ ವಿಶ್ವಪರಿಸರ ದಿನವನ್ನು ಆಚರಿಸುತ್ತಾ ಬಂದಿದ್ದೇವೆ. ಏನೂ ಪರಿಣಾಮವಾಗಿಲ್ಲವೇ? ಎಂಬ ಪ್ರಶ್ನೆ ಮೂಡುವುದು ಸಹಜ. ಖಂಡಿತವಾಗಿಯೂ ಎದ್ದು ಕಾಣುವ ಪರಿಣಾಮಗಳು ಕಂಡುಬಂದಿವೆ. 'ಪರಿಸರ'ದ ಬಗೆಗಿನ ಜಾಗೃತಿ ಹೆಚ್ಚಾಗಿದೆ. ಪರಿಸರದ ಮೇಲಾಗುವ ಯಾವುದೇ ದಾಳಿ ತತ್‌ಕ್ಷಣ ಮಾಧ್ಯಮಗಳಲ್ಲಿ ವರದಿಯಾಗುತ್ತದೆ. ಮರಗಳ ಸಂರಕ್ಷಣೆ, ಕೆರೆಗಳ ಸಂರಕ್ಷಣೆ, ಗಿಡ ನೆಡುವುದು, ಘನ ತ್ಯಾಜ್ಯಗಳ ವಿಲೇವಾರಿ ಮುಂತಾದ ವಿಷಯಗಳು ಗಮನ ಸೆಳೆಯುತ್ತಿವೆ. ಆದರೆ ಜಾಗೃತಿ ಹೆಚ್ಚಾದಂತೆ ಸಮಸ್ಯೆಯ ಸ್ವರೂಪವೂ ಹೆಚ್ಚಾಗುತ್ತಿದೆ ಇಲ್ಲವೇ ಬದಲಾಗುತ್ತಿದೆ.

ತಣ್ಣನೆಯ ಎ.ಸಿ. ಮೂಲೆಗಳಲ್ಲಿ ಓಡಾಡುತ್ತಾ, ನುಣುಪಾದ ನೆಲದ ಮೇಲೆ ಕೊಂಡ ವಸ್ತುಗಳ ಟ್ರಾಲಿ







ನೊರೆ ತುಂಬಿ ಉಕ್ಕಿದ ಬೆಂಗಳೂರಿನ ವರ್ತೂರು ಕೆರೆ

ಓಡಿಸುತ್ತಾ ನಲಿಯುವ ನಾಗರಿಕರಿಗೆ ತಾವು ಕೊಂಡ ಪ್ರತಿ ವಸ್ತುವಿನ ಹಿಂದೆಯೂ ಪರಿಸರ ವಿನಾಶದ ಅಂಶ ಇದೆ ಎಂದು ಅರಿವಾಗುವುದಿಲ್ಲ. ಗಾಜಿನ ಕಟ್ಟಡವನ್ನು ಕಟ್ಟಿ ತಾಪವನ್ನು ಏರಿಸಿ, ಅದನ್ನು ತಗ್ಗಿಸಲು ಬಳಸುವ ವಿದ್ಯುತ್ ಶಕ್ತಿ, ನೆಲವನ್ನು ಥಳ ಥಳಿಸುವಂತೆ ತೊಳೆಯಲು ಬಳಸುವ ವಿಪರೀತ ಎನಿಸುವಷ್ಟು ಮಾರ್ಜಕಗಳು, ಆಹಾರವನ್ನು ತಾಜಾ ಇಡಲು ಮಾಡುವ ಟೆಟ್ರಾ ಪ್ಯಾಕ್‌ಗಳು, ಮೂಲೆ ಝಗ ಝಗಿಸುವಂತೆ ಬೆಳಗಲು ಬಳಸುವ ವಿದ್ಯುತ್ ಶಕ್ತಿ ಇವೆಲ್ಲದರ ಬೆಲೆಯೂ ನಾವು ಕೊಂಡ ಸಾಮಾನಿನ ಮೇಲಿರುತ್ತದೆ. ಆದರೆ ಅದು ಮಾಡುವ ಪರಿಸರ ವಿನಾಶದ ಬೆಲೆಯನ್ನು ನಾವು ತೆರುವುದು ಹೇಗೆ?

ನಾವು ಬಳಸುವ ದ್ವಿಚಕ್ರ ವಾಹನಗಳು, ಕಾರುಗಳು ಹೊರ ಸೂಸುವ ಮಾಲಿನ್ಯ, ನಮ್ಮ ಮನೆಯಿಂದ ಘನತ್ಯಾಜ್ಯದ ರೂಪದಲ್ಲಿ ಹೊರ ಬೀಳುವ ಸೀಸ, ರಂಜಕ, ಗಂಧಕ, ಪಾದರಸಯುಕ್ತ ವಸ್ತುಗಳು, ನಮ್ಮ ಬಚ್ಚಲುಗಳಿಂದ ಹರಿದು ಹೋಗುವ ಧಾರಾಳ ಪ್ರಮಾಣದ ಸೋಪು, ಶಾಂಪೂಗಳು, ನಾವು ಬಳಸಿ ಬಿಸಾಡುವ ಪೆನ್ನಿನ ರಿಫಿಲ್, ಬಲ್ಬ್, ಪ್ಲಾಸ್ಟಿಕ್ ಚೀಲ, ನೀರಿನ ಬಾಟಲಿ, ಹೊಟೇಲಿನಿಂದ ಕಟ್ಟಿಸಿ ತಂದ ಊಟದ ಡಬ್ಬಿಗಳು ಎಲ್ಲವೂ ಪರಿಸರಕ್ಕೆ ಮಾರಕ!

ರಸ್ತೆಯ ಮೂಲೆಯಲ್ಲಿದ್ದ ಕಿರಾಣಿ ಅಂಗಡಿಯವ ಅಗ್ಗದ ಕಾಗದದ ಶಂಖಾಕೃತಿಯ ಪೊಟ್ಟಣ ಕಟ್ಟಿ, ಸೆಣಬಿನ ದಾರ ಬಿಗಿದು ಸಾಮಾನು ಕೊಡುತ್ತಿದ್ದ, ಅರಿವೆಯ ಚೀಲದಲ್ಲಿ ಅಕ್ಕಿ, ಗೋಧಿ, ಸಕ್ಕರೆ ತರುತ್ತಿದ್ದ ದಿನಗಳು ಈಗ ನಗರ, ಪಟ್ಟಣಗಳಲ್ಲಿ ಮುಗಿದು ಹೋಗಿವೆ.. 'ಪಾಟಿ'ಯ (ಸ್ಲೇಟ್) ಮೇಲೆ ಬರೆದು ಅಳಿಸಿ, ಮತ್ತೆ ಬರೆಯುತ್ತಿದ್ದ ಮಕ್ಕಳು ಈಗ ಅದೆಂದರೆ ಏನು? ಎನ್ನುವಂತಾಗಿದೆ. ನಯವಾದ ಉತ್ತಮ ಗುಣಮಟ್ಟದ ಕಾಗದದ ಒಂದೇ ಬದಿಗೆ ಬರೆದು ಬಿಸಾಡುವ ಯುವ ಜನತೆಗೆ ಆ ಕಾಗದ ತಯಾರಾಗಲು ಬೇಕಾಗುವ ಮರಗಳ ನಾಶದ ಅರಿವಿಲ್ಲ.

ಇವೆಲ್ಲದರ ಫಲವಾಗಿ ನಾವಿಂದು ನಮ್ಮ ಪರಿಸರವನ್ನು ಅಪಾಯಕ್ಕೆ ತಳ್ಳಿದ್ದೇವೆ. ನಾವಿರುವ ಪರಿಸರ ಅಪಾಯದಲ್ಲಿದೆ ಎಂದರೆ, ನಮ್ಮ ಮನೆ ಅಪಾಯದಲ್ಲಿದೆ ಎಂಬಂತೆ.

## ನಾವೇನು ಮಾಡಬೇಕು?

ಇವೆಲ್ಲವೂ ದೊಡ್ಡ ನಿರ್ಧಾರದ, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಚರ್ಚಿತವಾಗುತ್ತಿರುವ ವಿಷಯಗಳು, ಅದಕ್ಕೇ ಪರಿಹಾರ ಕಂಡುಹಿಡಿಯುವ ಜವಾಬ್ದಾರಿಯೂ ಸರ್ಕಾರದ್ದೇ ಎಂದು ನಾವು ಸುಮ್ಮನೆ ಕೂರುವಂತಿಲ್ಲ. ಏಕೆಂದರೆ ಎಲ್ಲ ಸಮಸ್ಯೆಗಳೂ ಆರಂಭವಾಗುವುದು ನಮ್ಮಿಂದ ಮಾತ್ರ ಅಲ್ಲವಾದರೂ ಪರಿಹಾರ ನಮ್ಮಿಂದ ಆರಂಭವಾಗಬಹುದು. ಅದು ಹಾಗಾಗುವಂತೆ ಮಾಡಬೇಕು ಎನ್ನುವುದಾದರೆ ಜನ ಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸುವ ಅವಶ್ಯಕತೆ ಇದೆ. ಮತ್ತೆ ಇದು ಯಾರ ಜವಾಬ್ದಾರಿ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮೊಟ್ಟ ಮೊದಲು, ನಮ್ಮ ಶಾಲೆಯ ಪಠ್ಯ ಕ್ರಮಗಳಲ್ಲಿ ಇದನ್ನು ಅಳವಡಿಸಬೇಕು. 'ಪರಿಸರ ವಿಜ್ಞಾನ' ಎಂಬ ವಿಷಯವನ್ನು ಮಕ್ಕಳು ಓದುತ್ತಾರಾದರೂ ಅಲ್ಲಿ ಜೀವನದಲ್ಲಿ ಅಳವಡಿಸಿಕೊಳ್ಳುವ ಸರಳ ವಿಷಯಗಳನ್ನು ಉದಾ: ಶಕ್ತಿಯ ಮಿತಬಳಕೆ, ನೀರಿನ ಮರು ಬಳಕೆ, ಕಾಗದದ ನ್ಯಾಯಯುತ ಉಪಯೋಗ ಮುಂತಾದ ವಿಷಯಗಳನ್ನು ಅಳವಡಿಸಬೇಕು. ಮಕ್ಕಳಲ್ಲಿ ಮೂಡಿದ ಅರಿವು ನಿಜವಾಗಿಯೂ ಪ್ರಯೋಜನಕಾರಿ.

ಮನೆಗಳಲ್ಲಿ ತ್ಯಾಜ್ಯ ವಸ್ತುವಿನ ವಿಂಗಡಣೆ ಮತ್ತು ಸರಿಯಾದ ನಿರ್ವಹಣೆಯನ್ನು ಕಡ್ಡಾಯ ಮಾಡುವುದು ಅನಿವಾರ್ಯವಾಗಿದೆ. ಇಂದು ದೊಡ್ಡ ನಗರಗಳಲ್ಲಿಯ ಘನತ್ಯಾಜ್ಯದ ವಿಲೇವಾರಿಯ ಸಮಸ್ಯೆಯನ್ನು ಪರಿಗಣಿಸಿದರೆ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಕಸವನ್ನು ಉತ್ಪಾದನೆಯ ಹಂತದಲ್ಲಿಯೇ ಕಡಿಮೆ ಮಾಡುವುದು ಅವಶ್ಯಕವೆಂದೆನಿಸುತ್ತದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕಸದ ಉತ್ಪಾದನೆಗೆ ದಂಡವನ್ನೂ ಹಾಕುವಂತಾದರೆ ಬಹುಶಃ ಸಮಸ್ಯೆ ಪರಿಹಾರವನ್ನು ಕಂಡುಕೊಳ್ಳಬಹುದು.

ಸೌರಶಕ್ತಿಯ ಬಳಕೆಯನ್ನು ಈಗಿರುವ ಸ್ನಾನದ ನೀರನ್ನು ಕಾಯಿಸುವ ಹಂತದಿಂದ ಮುಂದುವರಿಸಿ, ಮನೆ ಬೆಳಗಿಸಲು, ಅಡುಗೆ ಮಾಡಲು ಕೂಡಾ ಬಳಸುವಂತಾಗಬೇಕು. ಕನಿಷ್ಠ ಪಕ್ಷ ಮನೆಯನ್ನು ಬೆಳಗಿಸುವ ಒಂದೆರಡು ಬಲ್ಬ್‌ಗಳನ್ನಾದರೂ ಸೌರಶಕ್ತಿಯಿಂದ ಬೆಳಗುವಂತೆ ಮಾಡುವುದು ಅವಶ್ಯಕ.

ಒಟ್ಟಾರೆ ಜೀವನ ಶೈಲಿಯನ್ನು ಪರಿಸರ ಸ್ನೇಹಿಯಾಗಿಸಿಕೊಳ್ಳಬೇಕು. ಉಣ್ಣುವ, ಉಡುವ, ಬದುಕುವ ಎಲ್ಲ ಹಂತಗಳಲ್ಲಿ ಮಿತಬಳಕೆ, ಮರುಬಳಕೆ, ನ್ಯಾಯಯುತ ಬಳಕೆಯ ವಿಧಾನಗಳು ನಮ್ಮ ಪರಿಸರವನ್ನು ಮಾಲಿನ್ಯ ಮುಕ್ತವಾಗಿಸಿ ಸುರಕ್ಷಿತವಾಗಿಸಬಹುದು. ಹಾಗಾಗುವಂತೆ ಮಾಡಲು ನಮ್ಮೆಲ್ಲರ ಇಚ್ಛಾಶಕ್ತಿಯನ್ನು ಒಗ್ಗೂಡಿಸಿಕೊಂಡು, ಈ ವಿಶ್ವಪರಿಸರ ದಿನದಂದು ಕಾರ್ಯ ಪ್ರವೃತ್ತರಾದಲ್ಲಿ ಈ ಏಕೈಕ ಜೀವಗೋಳ ಹಾಗೂ ಇಲ್ಲಿರುವ ಸಮಸ್ತ ಜೀವರಾಶಿ ಸುರಕ್ಷಿತವಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.